# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 224 |
| ಸದಸ್ಯರ ಹೆಸರು | ಶ್ರೀ ಬಿ.ಜಿ.ಪಾಟೀಲ್ |
| ಉತ್ತರಿಸುವ ದಿನಾಂಕ | 06-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

*****

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎ.ಬಿ.ಸಿ. ದರ್ಜೆಯ ದೇವಾಲಯಗಳ ಸಂಖ್ಯೆ ಎಷ್ಟು:(ವಿವರ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳ ವಿವರ ಈ ಕೆಳಕಂಡತಿದೆ.
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಪ್ರವರ್ಗ</th><th>ಅಧಿಸೂಚಿತ ಸಂಸ್ಥೆಗಳ ಸಂಖ್ಯೆ</th></tr>
<tr><td rowspan="3">1.</td><td rowspan="3">ಯಾದಗಿರಿ</td><td>ಎ</td><td>2</td></tr>
<tr><td>ಬಿ</td><td>3</td></tr>
<tr><td>ಸಿ</td><td>1207</td></tr>
<tr><td colspan="3">ಒಟ್ಟು</td><td>1212</td></tr>
<tr><td rowspan="3">2.</td><td rowspan="3">ಕಲಬುರಗಿ</td><td>ಎ</td><td>4</td></tr>
<tr><td>ಬಿ</td><td>2</td></tr>
<tr><td>ಸಿ</td><td>1624</td></tr>
<tr><td colspan="3">ಒಟ್ಟು</td><td>1630</td></tr>
</table></td></tr>
<tr><td>ಆ)</td><td>ಸದರಿ ದೇವಾಲಯಗಳಲ್ಲಿ ಇರುವ ಮೂಲ ಸೌಲಭ್ಯಗಳ ಕೊರತೆಗಳು ಯಾವುವು: ಕೊರತೆಗಳನ್ನು ನಿವಾರಿಸಲು ಯೋಜನೆ ರೂಪಿಸಲಾಗಿದೆಯೇ?<br>ಯೋಜನೆಯ ರೂಪುರೇಷೆಗಳೇನು: (ವಿವರ ನೀಡುವುದು)</td><td>ಸದರಿ ದೇವಾಲಯಗಳಲ್ಲಿ ಶೌಚಾಲಯ, ಕುಡಿಯುವ ನೀರು & ಯಾತ್ರಿಕರ ನಿವಾಸ ಇನ್ನಿತರೆ ಮೂಲಭೂತ ಸೌಕರ್ಯಗಳ ಕೊರತೆಗಳು ಕಂಡುಬರುತ್ತದೆ.<br><br>ದೇವಾಲಯಗಳಲ್ಲಿ ಸಂಗ್ರಹವಾಗುವ ಆದಾಯಕ್ಕೆ ಅನುಗುಣವಾಗಿ ಪ್ರಸ್ತಾಪಿತ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಸುತ್ತೋಲೆ ಸಂಖ್ಯೆ: CNR1/CR/346/2010-11 ದಿನಾಂಕ:22.03.2011 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿನ ಅಂಶಗಳ ಬಗ್ಗೆ ನಿರ್ದೇಶನದಂತೆ ಸೂಕ್ತ ಕ್ರಮವಹಿಸಲು ಸಂಬಂಧಪಟ್ಟವರಿಗೆ ತಿಳಿಸಲಾಗಿರುತ್ತದೆ.</td></tr>
</table>

.....2

| | | |
|---|---|---|
| ಇ) | ಸದರಿ ದೇವಾಲಯಗಳಿಂದ ಬರುವ ವಾರ್ಷಿಕ ಆದಾಯವನ್ನು ಸಂಪೂರ್ಣವಾಗಿ ಅದೇ ದೇವಾಲಯದ ಅಭಿವೃದ್ಧಿಗೆ ಬಳಸಲಾಗುತ್ತಿದೆಯೇ: ಅಥವಾ ಸರ್ಕಾರ ಬೇರೆ ಇಲಾಖೆಯ ಕಾರ್ಯಕ್ರಮ ಗಳಿಗೂ ಬಳಸಿಕೊಳ್ಳುತ್ತಿದೆಯೇ?(ವಿವರ ನೀಡುವುದು) | ಅಧಿಸೂಚಿತ ದೇವಾಲಯಗಳಿಗೆ ಬರುವ ಆದಾಯವನ್ನು ಆಯಾಯಾ ದೇವಾಲಯಗಳ ಹೆಸರಿನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗಳಲ್ಲಿ ಸಂಗ್ರಹಿಸಿ ದೇವಾಲಯದ ನಿರ್ವಹಣೆಗೆ, ನಿತ್ಯಕಟ್ಲೆ/ಹೆಚ್ಚುಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ, ಮೂಲಭೂತ ಸೌಕರ್ಯ ಒದಗಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆಯ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ಬಳಸಲಾಗುತ್ತಿದೆ. ಬೇರೆ ಇಲಾಖೆ ಕಾರ್ಯಕ್ರಮಗಳಿಗೆ ಬಳಸಲಾಗುವುದಿಲ್ಲ. |

ಸಂಖ್ಯೆ: ಕಂಇ 110 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು